10. ಎಲ್ಲಾ ಸಾರ್ವಜನಿಕರಿಗೆ ಹಾಗೂ ಹಿರಿಯ ನಾಗರೀಕರಿಗೆ ಅಪರಾಧ ತೆಗಟ್ಟಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.
11. ಪೂರ್ವ ಸಜೆ ಅಸಾಮಿಗಳ ಚಟುವಟಿಕೆಗಳನ್ನು ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ.
12. ಅಪಹರಣ ಪ್ರಕರಣಗಳನ್ನು ಪತ್ತೆಹಚ್ಚಲು ಹಾಗೂ ತಡೆಗಟ್ಟಲು ವಿಶೇಷ ದಳಗಳನ್ನು ರಚಿಸಲಾಗಿದೆ.
13. ಬೆಂಗಳೂರು ನಗರಕ್ಕೆ ಆಗಮಿಸುವ ಹೊಸ ನಾಗರೀಕರ ಬಗ್ಗೆ ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ.
14. ಪ್ರತಿಯೊಂದು ಠಾಣಾ ಮಟ್ಟದಲ್ಲಿರುವ ಬಡಾವಣೆಗಳಲ್ಲಿ ಹೊಸಬರು ಬಂದು ವಾಸಿಸುವ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಹಾಗೂ ಹಿರಿಯ ನಾಗರೀಕರು ವಾಸಿಸುವ ಸ್ಥಳಗಳಲ್ಲಿ ಸೂಕ್ತ ಸಮೀಕ್ಷೆ ನಡೆಸಿ ಅವರಿಗೆ ರಕ್ಷಣೆ ನೀಡಲಾಗುತ್ತಿದೆ.

ವಿದ್ಯುತ್ ಕೊರತೆ ನಿವಾರಿಸಲು ಅನುಸರಿಸುವ ಕ್ರಮ

2134 (2533) - ಶ್ರೀ ಸೋಮಶೇಖರ ಬಿ (ಮಳವಳ್ಳಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಪ್ರಾಂತೀಯ ವಿದ್ಯುತ್ ಮಂಡಲಿ (SREB) ಎ.ಬಿ.ಟಿ. (AVALABILITY BASE TRADE) ನ್ನು 2003ರ ಜನವರಿ ಒಂದರಿಂದ ಜಾರಿಗೆ ತರಲು ಉದ್ದೇಶಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ

ಆ) ಇದರಿಂದ ರಾಜ್ಯದ ಮೇಲೆ ಆಗಲಿರುವ ಹೆಚ್ಚುವರಿ ಹೊರೆ ಎಷ್ಟು?

ಇ) ಇದನ್ನು ನಿವಾರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು ಬಂದಿದೆ.

ಕೇಂದ್ರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಮಿತಿಗಿಂತ ಹೆಚ್ಚು ವಿದ್ಯುತ್ತನ್ನು ಪಡೆದಲ್ಲಿ ಪ್ರತಿ ಯೂನಿಟ್‌ಗೆ

ಆ) ರೂ. 4.20 ರಷ್ಟು ದರವನ್ನು ಮತ್ತು ನೀಡಬೇಕಾಗಿರುತ್ತದೆ ಇದನ್ನು

ಇ) ತಡೆಗಟ್ಟಲು ವಿದ್ಯುತ್ ಪಡೆಯುವಿಕೆಯನ್ನು ರಾಜ್ಯದ ಪಾಲಿಗಷ್ಟೇ ಸೀಮಿತಗೊಳಿಸಲಾಗುವುದು. ಅಲಲ್ದೇ ಆರ್ಥಿಕ ಲಭ್ಯತೆಯನ್ನು ಅನುಸರಿಸಿ ವಿದ್ಯುತ್ತನ್ನು ಆದಷ್ಟು ಹೊರಗಿನಿಂದ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು ಒಂದು ವೇಳೆ ಅನಂತರವೂ ವಿದ್ಯುತ್ ಕೊರತೆ ಉದ್ಭವಿಸಿದಲ್ಲಿ ಅದನ್ನು ಸರಿದೂಗಿಸಲು ಅನಿಯಮಿತ ಲೋಡ್ ರೆಡ್ಡಿಂಗ್‌ನ್ನು ನಿರ್ವಹಿಸಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ

2136 (2536) - ಶ್ರೀ ಸೋಮಶೇಖರ್ ಬಿ. (ಮಳವಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?